# ಹಸಿರು ಭಾರತ ಸುವರ್ಣ ಸಂಪುಟ

ಸ್ವತಂತ್ರ ಭಾರತದ ‘ಪರಿಸರ ಹೋರಾಟಗಳ ಸಂಕಥನ’ಕ್ಕೀಗ ಐವತ್ತರ ಸಂಧಿಕಾಲ. 1973ರ ‘ಚಿಪ್ಕೋ ಆಂದೋಲನ’ದಿಂದ ಆರಂಭಗೊಂಡ ಆಧುನಿಕ ಭಾರತದ ಪರಿಸರ ಹೋರಾಟಗಳ ಪರಂಪರೆ ಕಳೆದ 50 ವರ್ಷಗಳ ಅವಧಿಯಲ್ಲಿ ಕಂಡ ಏಳುಬೀಳುಗಳು, ಅಭಿವೃದ್ಧಿ ಮತ್ತು ಪರಿಸರ ಸಂರಕ್ಷಣೆಯ ನಡುವಿನ ಸಂಘರ್ಷದ ಚಿತ್ರಣವಾಗಿರುವಂತೆ ಮನುಷ್ಯನ ನೈತಿಕತೆ ಮತ್ತು ಅನೈತಿಕತೆ ನಡುವಣ ಸಂಘರ್ಷದ ಕಥನವೂ ಆಗಿವೆ. ಪರಿಸರ ಹೋರಾಟಗಳ ಈ ಅವಲೋಕನ, ಸಾಗಿಬಂದ ಹಾದಿಯನ್ನು ಸೂಚಿಸುವುದರ ಜೊತೆಗೆ, ವರ್ತಮಾನದ ನಮ್ಮ ನಡೆ ಹಾಗೂ ಭವಿಷ್ಯದಲ್ಲಿ ಸಾಗಬೇಕಾದ ಹಾದಿಯನ್ನೂ ಸ್ಪಷ್ಟಪಡಿಸುತ್ತಿದೆ. ಜೂನ್ 5ರ ‘ವಿಶ್ವ ಪರಿಸರ ದಿನ’ದ ಸಂದರ್ಭದಲ್ಲಿ ಪ್ರಕಟಗೊಂಡಿರುವ ಈ ವಿಶೇಷ ಲೇಖನ, ಭಾರತದ ಪರಿಸರ ಹೋರಾಟಗಳು ವಿಶ್ವಕ್ಕೆ ಮಾದರಿಯಾಗಿರುವುದನ್ನೂ ಗುರ್ತಿಸಿದೆ.

■ ಗುರುರಾಜ್ ಎಸ್. ದಾವಣಗೆರೆ

